# ನ್ಯೂರಾಲಿಂಕ್‌ನಿಂದ ಫೋನ್‌ಗೆ ವಿದಾಯ?

ನಮ್ಮೆಲ್ಲರ ಕಿಸೆಯಲ್ಲಿ ಬೆಚ್ಚಗೆ ಅಡಗಿರುವ ಫೋನ್‌ಗಳು, ಬೇಡವೇ ಬೇಡ ಎನ್ನುವಂತಹ ಕಾಲ ಬರಲಿದೆ... ಇದು ಎಲಾನ್ ಮಸ್ಕ್ ನುಡಿದ ಭವಿಷ್ಯ.

■ ಶಶಿಕುಮಾರ್ ಸಿ.



ಚಿಪ್ ಅಳವಡಿಕೆಯ ಮೂಲಕ ಮನುಷ್ಯನ ಮೆದುಳನ್ನು ನಿಯಂತ್ರಣ ಮಾಡುವ ತಂತ್ರಜ್ಞಾನದಲ್ಲಿ ಈಗಾಗಲೇ ಯಶಸ್ವಿಯಾಗಿರುವ 'ನ್ಯೂರಾಲಿಂಕ್', ಮತ್ತೊಂದು ಪ್ರಯೋಗಕ್ಕೂ ಮುಂದಾಗಿದೆ.

ಹೊಸ ಪ್ರಯೋಗ ಯಶಸ್ವಿಯಾದಲ್ಲಿ, ನ್ಯೂರಾಲಿಂಕ್‌ನ ಚಿಪ್‌ಗಳು ಭವಿಷ್ಯದಲ್ಲಿ ಈಗಿನ ಫೋನ್‌ಗಳ ಜಾಗವನ್ನು ಆಕ್ರಮಿಸಲಿವೆ. ಭವಿಷ್ಯದಲ್ಲಿ ಯಾವುದೇ ಫೋನ್‌ಗಳು ಇರುವುದಿಲ್ಲ, ಕೇವಲ ನ್ಯೂರಾಲಿಂಕ್‌ಗಳು ಇರಲಿವೆ... ಇಂತಹದ್ದೊಂದು ಸುದ್ದಿಯನ್ನು ಸ್ವತಃ ನ್ಯೂರಾಲಿಂಕ್ ಕಂಪನಿಯ ಮಾಲೀಕ ಎಲಾನ್ ಮಸ್ಕ್ 'ಎಕ್ಸ್'ನಲ್ಲಿ ಪ್ರಕಟಿಸಿದ್ದಾರೆ.

ಫೋನ್‌ಗಳ ಸ್ಥಾನವನ್ನು ನ್ಯೂರಾಲಿಂಕ್ ಹೇಗೆ ತುಂಬುತ್ತದೆ ಎಂಬುದನ್ನು ಸದ್ಯಕ್ಕೆ ಮಸ್ಕ್ ವಿವರಿಸಿಲ್ಲ. ಆದರೆ, ಅವರು ಹೊಸ ಹೊಸ ತಂತ್ರಜ್ಞಾನ ಅಭಿವೃದ್ಧಿಪಡಿಸುವ ಮುನ್ನ, ಆ ಬಗ್ಗೆ ಸಣ್ಣ ಸುಳಿವನ್ನಷ್ಟೇ ಬಿಟ್ಟುಕೊಟ್ಟು ಜಗದ ಕುತೂಹಲ ಹೆಚ್ಚಿಸುತ್ತಾರೆ. ಹೀಗಾಗಿ, ಅವರ ಈ ಸಣ್ಣ ಸುಳಿವನ್ನು ತಳ್ಳಿಹಾಕುವಂತಿಲ್ಲ. ಬಹುಶಃ ಅತ್ಯಾಧುನಿಕ ನ್ಯೂರಾಲಿಂಕ್ ಚಿಪ್‌ಗಳನ್ನು ಅಭಿವೃದ್ಧಿಪಡಿಸಿ, ಮೆದುಳಿಗೆ ಅಳವಡಿಸಿ, ಅದನ್ನು ನಿಯಂತ್ರಿಸಲು ನ್ಯೂರಾಲಿಂಕ್ ಇಂಟರ್‌ಫೇಸ್ ವ್ಯವಸ್ಥೆ ಸ್ಥಾಪಿಸುವ ಸಾಧ್ಯತೆಗಳತ್ತ ಎಲಾನ್ ಚಿತ್ತ ಹರಿಸಿರಬಹುದು.

ಎಲಾನ್‌ರ ಎಕ್ಸ್ ಪೋಸ್ಟ್‌ಗೆ ಹಲವು ಆಕ್ಷೇಪಗಳು ವ್ಯಕ್ತವಾಗಿವೆ. 'ಪಾರ್ಶ್ವವಾಯು, ಕೈಕಾಲು ಸ್ವಾಧೀನ ಕಳೆದುಕೊಂಡಂಥವರಿಗೆ ಇದರ ಅಗತ್ಯವಿದೆ. ಉಳಿದವರಿಗೆ ಇದರ ಅಗತ್ಯವೇನು? ಆರೋಗ್ಯವಂತರು ತಮ್ಮ ಮೆದುಳಿಗೆ ಚಿಪ್ ಯಾಕೆ ಅಳವಡಿಸಿಕೊಳ್ಳಬೇಕು?' ಎಂದು ಹಲವರು ಪ್ರಶ್ನಿಸಿದ್ದಾರೆ.

ಮೆದುಳಿನ ಚಿಪ್ ತಂತ್ರಜ್ಞಾನದಲ್ಲಿ ಕಾರ್ಯನಿರ್ವಹಿಸುತ್ತಿರುವ ನ್ಯೂರಾಲಿಂಕ್ ಈಗಾಗಲೇ 29 ವರ್ಷದ 'ನೋಲ್ಯಾಂಡ್ ಅರ್ಬಾಗ್' ಎಂಬುವರ ಮೇಲೆ ಈ ಪ್ರಯೋಗ ಮಾಡುತ್ತಿದೆ. ಅರ್ಬಾಗ್ ಎಂಟು ವರ್ಷಗಳ ಹಿಂದೆ ಸಂಭವಿಸಿದ ಅಪಘಾತದಲ್ಲಿ ಭುಜದಿಂದ ಕೆಳಕ್ಕೆ ಪಾರ್ಶ್ವವಾಯುವಿಗೆ ಒಳಗಾದರು. ಅವರು ಇದೇ ಜನವರಿ 28ರಂದು ಮೆದುಳಿನ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದು, ಈಗ ಚೇತರಿಸಿಕೊಳ್ಳುತ್ತಿದ್ದಾರೆ. ಅದರ ಬಳಿಕ ನ್ಯೂರಾಲಿಂಕ್ ಬ್ಲಾಗ್‌ಪೋಸ್ಟ್‌ನಲ್ಲಿ ಈ ಕುರಿತು ವಿವರವಾದ ಮಾಹಿತಿಯನ್ನು ಬಹಿರಂಗಪಡಿಸಲಾಯಿತು.

ಮಾರ್ಚ್‌ನಲ್ಲಿ ನ್ಯೂರಾಲಿಂಕ್ ಅರ್ಬಾಗ್ ಅವರ ಪ್ರಗತಿಯನ್ನು ಪ್ರದರ್ಶಿಸುವ ವಿಡಿಯೊವನ್ನು ಹಂಚಿಕೊಂಡಿದೆ. ಈ ವಿಡಿಯೊದಲ್ಲಿ ನ್ಯೂರಾಲಿಂಕ್‌ನ ಬಿಸಿಐ ಚಿಪ್, ತಾನು ಇಷ್ಟಪಡುವ ಹೆಚ್ಚಿನ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಹೇಗೆ ಸಹಾಯ ಮಾಡಿದೆ ಎಂದು ಅರ್ಬಾಗ್ ಹೇಳಿದ್ದರು. ಚೆಸ್ ಆಡುವುದರ ಬಗ್ಗೆಯೂ ಅವರು ತಿಳಿಸಿದ್ದರು.

'ಪ್ರತಿದಿನ ನಾನು ಹೊಸದನ್ನು ಕಲಿಯುತ್ತಿದ್ದೇನೆ ಎಂಬಂತೆ ತೋರುತ್ತದೆ. ಇದನ್ನು ನನಗೆ ಮಾಡಲು ಸಾಧ್ಯವಾಗಿರುವುದು ಅದೃಷ್ಟ' ಎಂದು ಅರ್ಬಾಗ್ ಹೇಳಿದ್ದಾರೆ. ಎರಡನೇ ಪ್ರಯೋಗದಲ್ಲಿ ಪಾಲ್ಗೊಳ್ಳುವವರಿಗೆ ಅರ್ಜಿಗಳನ್ನು ಸ್ವೀಕರಿಸಲು ನ್ಯೂರಾಲಿಂಕ್ ಮುಂದಾಗಿದ್ದು, ಈ ಪ್ರಯೋಗದಲ್ಲಿಯೇ ಫೋನ್‌ಗಳ ಜಾಗವನ್ನು ನ್ಯೂರಾಲಿಂಕ್ ಹೇಗೆ ತುಂಬಬೇಕು ಎಂಬುದರತ್ತ ತೊಡಗಿಕೊಳ್ಳುವ ಸಾಧ್ಯತೆ ಇದೆ ಎನ್ನಲಾಗಿದೆ.

### ಬರಬಹುದೇ ಎಕ್ಸ್ ಫೋನ್?

ಎಲಾನ್ ಮಸ್ಕ್ ಆ್ಯಪಲ್ ಹಾಗೂ ಆ್ಯಂಡ್ರಾಯ್ಡ್ ಸ್ಮಾರ್ಟ್‌ಫೋನ್ ತಯಾರಿಕಾ ಕಂಪನಿಗಳಿಗೆ ಸೆಡ್ಡು ಹೊಡೆಯುವ ಸಲುವಾಗಿ ಎಕ್ಸ್ ಫೋನ್ ಹೊರತರುತ್ತಿದ್ದಾರೆ ಎನ್ನಲಾಗಿದೆ. ಈ ಬಗ್ಗೆಯೂ ಅವರು ಎಕ್ಸ್‌ನಲ್ಲಿ ಈಚೆಗೆ ಪೋಸ್ಟ್ ಹಾಕಿದ್ದಾರೆ. ಎಕ್ಸ್ ಫೋನ್ ಹಾಗೂ ಎಕ್ಸ್ ಆಪರೇಟಿಂಗ್ ಸಿಸ್ಟಂ ಸ್ಥಾಪಿಸಲು ಮಸ್ಕ್ ಉತ್ಸುಕರಾಗಿದ್ದು, ಶೀಘ್ರವೇ ಆ ಬಗ್ಗೆ ನಿರ್ಧಾರ ಹೊರಬೀಳಲಿದೆ.

ಮತ್ತೊಂದೆಡೆ ಸ್ಯಾಮ್‌ಸಂಗ್ ಮೊಬೈಲ್ ತಯಾರಿಕಾ ಕಂಪನಿಯೊಂದಿಗೆ ಮಸ್ಕ್ ಒಪ್ಪಂದ ಮಾಡಿಕೊಂಡಿದ್ದು, ತನ್ನ ಪ್ಲಾಟ್‌ಫಾರ್ಮ್‌ನ ಕೆಲವು ಉತ್ಪನ್ನಗಳನ್ನು ಸ್ಯಾಮ್‌ಸಂಗ್ ಫೋನ್‌ಗಳಲ್ಲಿ ಸ್ಥಾಪಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

### ನ್ಯೂರಾಲಿಂಕ್ ಅಪಾಯಕಾರಿ

ನ್ಯೂರಾಲಿಂಕ್‌ಗೆ ಹಲವು ಸವಾಲುಗಳು ಎದುರಾಗಿವೆ. ನ್ಯೂಯಾರ್ಕ್ ಪೋಸ್ಟ್ ವರದಿ ಪ್ರಕಾರ, ಪ್ರಾಣಿಗಳ ಆರೈಕೆ ತಜ್ಞ ಲಿಂಡ್ಸೆ ಶಾರ್ಟ್ ನ್ಯೂರಾಲಿಂಕ್ ಕಂಪನಿಯ ವಿರುದ್ಧ ಮೊಕದ್ದಮೆ ಹೂಡಿದ್ದಾರೆ. ಪ್ರಾಣಿಗಳಲ್ಲಿ ನ್ಯೂರಾಲಿಂಕ್‌ಗಳನ್ನು ಹಾಕಿ ಪ್ರಾಯೋಗಿಕ ಪರೀಕ್ಷೆಗೆ ಒಳಪಡಿಸುವಾಗ ಸರಿಯಾದ ರಕ್ಷಣಾ ಸಾಧನಗಳನ್ನು ಒದಗಿಸಲು ಕಂಪನಿ ವಿಫಲವಾಗಿದೆ ಎಂಬುದು ಅವರ ಆರೋಪ. ಚಿಪ್‌ನಿಂದಾಗಿ ಈ ಪ್ರಾಣಿಗಳಲ್ಲಿ ಕೆಲವು ಅಪಾಯಕಾರಿ ವೈರಸ್ ಕಂಡುಬಂದಿದ್ದು, ಅದು ಮೆದುಳಿಗೆ ಗಂಭೀರ ಹಾನಿ ಉಂಟು ಮಾಡಬಹುದು ಎಂದಿದ್ದಾರೆ ಅವರು. ■